ಗಮನಿಸಬಹುದು. ಜೊತೆಗೆ, ಗಾಂಧೀಜಿಯ ಸಂಸ್ಕೃತಿ ಪರಿಕಲ್ಪನೆಗೂ ಅಂಬೇಡ್ಕರ್ ಪರಿಕಲ್ಪನೆಗೂ ಇರುವ ವ್ಯತ್ಯಾಸಗಳನ್ನು ಗುರುತಿಸಿ ಅಂಬೇಡ್ಕರ್ ಪರಿಕಲ್ಪನೆ ಏಕೆ ಮುಖ್ಯ ಎಂಬ ಚಿಂತನೆ ಮಾಡಿರುವುದು ಕನ್ನಡ ಚಿಂತನೆಯ ಮುಖ್ಯವಾದ ವಿಚಾರ. ಅಂಬೇಡ್ಕರ್ ಅವರ ಪ್ರಕಾರ ಸಂಸ್ಕೃತಿಯು ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ನೆಲೆಗಟ್ಟಿನಿಂದ ಕೂಡಿರುವ ಪರಿಕಲ್ಪನೆಯಾಗಿದೆ.

ಅಂಬೇಡ್ಕರ್ ಅವರ ಪ್ರಜಾಸತ್ತೆ ಪರಿಕಲ್ಪನೆಯೂ ಕನ್ನಡ ಸಂವೇದನೆಯ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸರ್ಕಾರದ ರೂಪ ಮತ್ತು ವಿಧಾನವೇ ಪ್ರಜಾಸತ್ತೆ. ಅಂದರೆ ಅಂಬೇಡ್ಕರ್ ಪ್ರಕಾರ ಸರ್ಕಾರ ಜನರ ಬದುಕಿನಲ್ಲಿ ಬದಲಾವಣೆಗಳನ್ನು ತರುವ ಒಂದು ಸಾಧನ. ಪ್ರಜಾಸತ್ತೆಯು ಯಶಸ್ವಿಯಾಗಲು ಬಹುಪಕ್ಷಗಳ ವ್ಯವಸ್ಥೆ ಇರಬೇಕು. ಅನುವಂಶಿಯ ಮತ್ತು ನಿರಂಕುಶ ಅಧಿಕಾರವಿರಬಾರದು. ಸರ್ಕಾರದ ನಿಲುವುಗಳನ್ನು ವಿರೋಧಿಸುವ ಪಕ್ಷವೊಂದು ಇರಬೇಕು. ಅದು ಕ್ರಿಯಾಶೀಲವಾಗಿರಬೇಕು.

ಸಂವಿಧಾನಾತ್ಮಕ ಮೌಲ್ಯಗಳ ಪರಂಪರೆ ಸತತವಾಗಿ ಬೆಳೆಯಬೇಕು. ಜನರು ಮೌಲ್ಯಗಳನ್ನು ಕ್ರಮವಾಗಿ ಆಚರಿಸಬೇಕು. ಪ್ರಜಾಸತ್ತೆಯ ಹೆಸರಿನಲ್ಲಿ ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರು ದಾಳಿ ಮಾಡಬಾರದು. ಪ್ರಜಾಸತ್ತೆಯಲ್ಲಿ ನೈತಿಕ ಮೌಲ್ಯಗಳಿರಬೇಕು. ಯಾರಿಗಾದರೂ ಅನ್ಯಾಯವಾದರೆ ಅದನ್ನು ಬಗೆಹರಿಸುವ ಸಾರ್ವಜನಿಕ ಹಿತದ ಪ್ರಜ್ಞೆಯಿಂದ ಮುಂದಾಗಬೇಕು. ಒಟ್ಟಾರೆ ರಾಜಕೀಯ ಪ್ರಜಾಸತ್ತೆಯನ್ನು ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಪ್ರಜಾಸತ್ತೆಯಾಗಿ ಪರಿವರ್ತಿಸಬೇಕು ಎಂಬುದು ಅಂಬೇಡ್ಕರ್ ಅವರ ನಿಲುವು. ಅವರ ಪ್ರಕಾರ ಪ್ರಜಾಪ್ರಭುತ್ವವು ಮಾನವೀಯವಾದ ಮತ್ತು ಅವಶ್ಯವಾದ ಒಂದು ಸಂಘಟನೆ. ಅದರ ಉದ್ದೇಶಗಳು ಕೆಳಕಂಡಂತಿವೆ:

- ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನ, ಸ್ವಾತಂತ್ರ್ಯ ಸುಖವನ್ನು ಗಳಿಸುವ ವಾಕ್‌ಸ್ವಾತಂತ್ರ್ಯವಿರುವ ಧರ್ಮವನ್ನು ಆಚರಿಸುವ ಹಕ್ಕನ್ನು ಹೊಂದಿರಬೇಕು.
- ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಮಾನತೆಯನ್ನು ಸಾಧಿಸುವುದು.
- ಹಿಂದುಳಿದ ವರ್ಗ, ಜಾತಿ ಹಾಗೂ ಅಸ್ಪೃಶ್ಯ ಜಾತಿಗಳಿಗೆ ಉತ್ತಮ ಅವಕಾಶ ಒದಗಿಸುವುದು.
- ನಿರ್ಭಯವಾಗಿ ಬದುಕಲು ಅವಕಾಶ ಒದಗಿಸುವುದು
- ಹೊರಗಿನ ಆಕ್ರಮಣದಿಂದ ದೇಶವನ್ನು ರಕ್ಷಿಸಿ ಜನರಲ್ಲಿ ಅಭದ್ರತಾ ಭಾವವನ್ನು ಹೋಗಲಾಡಿಸುವುದು.

ಕನ್ನಡದ ಸಂದರ್ಭದಲ್ಲಿ 1974ರಿಂದ ಅಂಬೇಡ್ಕರ್ ಪ್ರಭಾವ ದಟ್ಟವಾಗಿ ಕಾಣಿಸಿಕೊಂಡಿತು. 1970ರಿಂದಲೂ ಕನ್ನಡ ಚಿಂತನೆಯ ಮೇಲೆ ಅಂಬೇಡ್ಕರ್ ಪ್ರಭಾವಗಳು ಆಗಿದ್ದರೂ, ಅದು ಕಾಣಿಸಿಕೊಂಡಿದ್ದು 1974ರ ನಂತರವೆಂದೇ ಹೇಳಬಹುದು. ಅಂಬೇಡ್ಕರ್ ಅವರ ವಿಚಾರಗಳನ್ನು ಬರಹಗಳ ಮೂಲಕ ಪತ್ರಿಕೆಗಳಲ್ಲಿ ಬರೆಯಲಾರಂಭಿಸಿದ್ದು, 1974ರಿಂದ ಎಂದು ಹೇಳಬಹುದು. ಏಕೆಂದರೆ ಬಸವಲಿಂಗಪ್ಪ ಅವರ 'ಬೂಸಾ ಚಳವಳಿ'ಯಿಂದ ಪ್ರಾರಂಭಗೊಂಡ ಅಂಬೇಡ್ಕರ್ ಚಿಂತನೆಗಳ ಪ್ರಭಾವ ಇಲ್ಲಿಯವರೆಗೂ ಮುಂದುವರಿದಿದೆ. 21ನೇ ಶತಮಾನ ಅಂಬೇಡ್ಕರ್ ಚಿಂತನೆಗಳ ಶತಮಾನವೆಂದರೂ ತಪ್ಪಲ್ಲ. 1976ರ ನಂತರ ದಲಿತ ಚಳವಳಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿತು. ಅದರ ಜೊತೆಗೆ ಪಂಚಮ ಪತ್ರಿಕೆ, ಅಂಬೇಡ್ಕರ್ ವಿಚಾರಗಳನ್ನು ಜನರಿಗೆ ತಲುಪಿಸಿತು. ಕನ್ನಡದ ಪ್ರಮುಖ ದಿನಪತ್ರಿಕೆಗಳು, ಸಾಹಿತ್ಯ ಪತ್ರಿಕೆಗಳು ಅಂಬೇಡ್ಕರ್ ವಿಚಾರಗಳಿಗೆ ಪ್ರಾಮುಖ್ಯತೆ ನೀಡಿದವು. 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳು ಅಂಬೇಡ್ಕರ್ ಕುರಿತು ವಿಶೇಷ ಲೇಖನಗಳನ್ನು ಮತ್ತು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿದವು. 'ಸುಧಾ' ಒಂದು ವಿಶೇಷಾಂಕವಾಗಿ ಹೊರಹೊಮ್ಮಿತು. ಸಾಹಿತ್ಯ ಪತ್ರಿಕೆಗಳಾದ ಶೂದ್ರ, ಸಂಕ್ರಮಣ, ಅನ್ವೇಷಣೆ, ಅಂಬೇಡ್ಕರ್